ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ

ಪತ್ರ ಸಂಖ್ಯೆ: ಆರ್‌ಡಿ 34 ಡಿಎಸ್‌ಪಿ 2011

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:- 27-04-2011.

## ಸುತ್ತೋಲೆ

ವಿಷಯ:- ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ನಕಲಿ ಅಥವಾ ಸುಳ್ಳು ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಿ ವೇತನ ಪಡೆಯುತ್ತಿರುವ ಬಗ್ಗೆ.

ಉಲ್ಲೇಖ:- 1.ದಿನಾಂಕ:-11-04-2011ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿಗಳು
2.ಸರ್ಕಾರಿ ಆದೇಶ ಸಂಖ್ಯೆ ಎಲ್‌ಡಬ್ಲ್ಯೂಎಲ್ 146 ಪಿಹೆಚ್‌ಪಿ77. ದಿನಾಂಕ:7-11-1977.
3.ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಎಲ್ 5 ಎಸ್‌ಡಬ್ಲ್ಯೂ ಡಬ್ಲ್ಯೂ 84. ದಿನಾಂಕ:5-3-1984
4.ಸರ್ಕಾರಿ ಆದೇಶ ಸಂಖ್ಯೆ ಸಂ.ಕಂ.ಇ.147 ಎಮ್‌ಎಸ್‌ಟಿ 2007. ದಿನಾಂಕ:1-12-2007.

-0-

ಅಂಗವಿಕಲರ ವೇತನ ಪಡೆಯಲು ಮತ್ತು ವೃದ್ಧಾಪ್ಯ ವೇತನ ಪಡೆಯಲು ಸಲ್ಲಿಸಿರುವ ದಾಸ್ತಾವೇಜುಗಳಾದ, ಕ್ರಮವಾಗಿ ಅಂಗವಿಕಲರ ಪ್ರಮಾಣ ಪತ್ರ ಹಾಗೂ ವಯಸ್ಸಿನ ದೃಡೀಕರಣ ಪತ್ರಗಳಲ್ಲಿ ವಸ್ತುನಿಷ್ಟ ವರದಿ ಇಲ್ಲದಿರುವ ಕಾರಣ ಹಾಗೂ ಸುಳ್ಳು ಅಥವಾ ನಕಲಿ ವೈದ್ಯಕೀಯ ಪ್ರಮಾಣಪತ್ರ ಸಲ್ಲಿಸಿ ಅನರ್ಹ ವ್ಯಕ್ತಿಗಳು ವೇತನ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆದುದರಿಂದ, ಇಂತಹ ಪ್ರಕರಣಗಳನ್ನು ಪತ್ತೆಹಚ್ಚಿ ಸೂಕ್ತಕ್ರಮಕೈಗೊಳ್ಳಲು ಕೆಳಕಂಡ ಸದಸ್ಯರನ್ನೊಳಗೊಂಡ ತಂಡವನ್ನು ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ.

1.ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳು-ಅಧ್ಯಕ್ಷರು.
2.ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾಮಾಜಿಕ ಭದ್ರತಾ ಪಿಂಚಣಿಗಳ ನಿರ್ದೇಶನಾಲಯದ ಸಾಂಖ್ಯಿಕ ಅಧಿಕಾರಿಗಳು-ಸದಸ್ಯ ಕಾರ್ಯದರ್ಶಿಗಳು.
3.ಉಪವಿಭಾಗಾಧಿಕಾರಿಗಳು ಸೂಚಿಸಿರುವ ವೈದ್ಯಾಧಿಕಾರಿಗಳು.
4.ಉಪವಿಭಾಗಾಧಿಕಾಗಳ ಕಛೇರಿಯ ಶಿರಸ್ತೇದಾರರು.

ತಂಡವು ತಮ್ಮ ವ್ಯಾಪ್ತಿಗೆ ಬರುವ ತಾಲ್ಲೂಕುಗಳಲ್ಲಿ ಈಗಾಗಲೇ ಮಂಜೂರಾಗಿರುವ ಫಲಾನುಭವಿಗಳ ಪಟ್ಟಿಯನ್ನು ಅರ್ಜಿದಾರರು ಸಲ್ಲಿಸಿರುವ ದಾಸ್ತಾವೇಜುಗಳೊಡನೆ ಪರಿಶೀಲಿಸುವುದು. ಅನುಮಾನಾಸ್ಪದ ಪ್ರಕರಣಗಳನ್ನು ಪಟ್ಟಿಮಾಡಿಕೊಂಡು ಫಲಾನುಭವಿಗಳ ಭೌತಿಕ ಪರಿಶೀಲನೆ ನಡೆಸತಕ್ಕದ್ದು.

ಫಲಾನುಭವಿಗಳು ನಕಲಿ ಅಥವಾ ಸುಳ್ಳುದಾಖಲೆ ನೀಡಿ ಮಾಸಾಶನ ಪಡೆಯುತ್ತಿದ್ದಲ್ಲಿ ಉಲ್ಲೇಖ(2) ರಿಂದ (4)ರ ಸರ್ಕಾರಿ ಆದೇಶಗಳಲ್ಲಿ ತಿಳಿಸಿರುವಂತೆ ಮಾಸಾಶನವನ್ನು ರದ್ದು ಪಡಿಸಿ, ಇಲ್ಲಿಯವರೆಗೂ ಪಡೆದಿರುವ ಮಾಸಾಶನದ ಮೊತ್ತವನ್ನು ಸರ್ಕಾರಕ್ಕೆ ಜಮಾ ಮಾಡಿಸಲು ಸೂಕ್ತ ಕ್ರಮಕೈಗೊಳ್ಳುವುದು. ಮುಂದುವರೆದಂತೆ, ವೈದ್ಯಕೀಯ ಪ್ರಮಾಣಪತ್ರದಲ್ಲಿರುವ ವರದಿಯು ವಸ್ತುನಿಷ್ಠಯಾಗಿರದಿದ್ದಲ್ಲಿ ಪ್ರಮಾಣಪತ್ರ ನೀಡಿದ ವೈದ್ಯಾಧಿಕಾರಿಗಳ ಹೆಸರನ್ನು ಸೂಕ್ತ ಕ್ರಮಕ್ಕಾಗಿ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರಿಗೆ ಸಲ್ಲಿಸುವುದು.

ತಂಡವು ಪ್ರತಿ ತಿಂಗಳು ಕನಿಷ್ಠ 10 ಪ್ರಕರಣಗಳನ್ನು ಪರಿಶೀಲಿಸತಕ್ಕದ್ದು. ವರದಿಯನ್ನು ತಮ್ಮ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(ಅಶೋಕ್ ಕುಮಾರ್ ಸಿ. ಮನೋಳಿ)
ಸರ್ಕಾರದ ಪ್ರದಾನ ಕಾರ್ಯದರ್ಶಿಗಳು
ಕಂದಾಯ ಇಲಾಖೆ.

ಪ್ರತಿಯನ್ನು:-

1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಧಾನಸೌಧ, ಬೆಂಗಳೂರು.
3) ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸುರು/ಗುಲ್ಬರ್ಗಾ/ಬೆಳಗಾವಿ.
4) ಎಲ್ಲಾ ಜಿಲ್ಲಾಧಿಕಾರಿಗಳು.
5) ಎಲ್ಲಾ ಉಪವಿಭಾಗಧಿಕಾರಿಗಳು/ತಹಸೀಲ್ದಾರರುಗಳು.
6) ಹೆಚ್ಚುವರಿ ಪ್ರತಿ ಮತ್ತು ರಕ್ಷಾ ಕಡತ.